ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 23.07.2024.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಯು.ಕೆ.ಐ. ವಕೀಲರಿಂದಃ**

2 ನೇ ಪ್ರತಿವಾದಿ ತನಗೆ ಬಂದ 2 ಎಕರೆ ಜಮೀನನ್ನು ತನ್ನ ಮಗನಾದ 2 ನೇ ಬಿ. ಪ್ರತಿವಾದಿಗೆ ಆಳಂದ ನ್ಯಾಯಾಲಯದಲ್ಲಿ ಹಿಭಾ ಮೂಲಕ ಡಿಕ್ರಿ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆವಾಗಿನಿಂದ 2 ನೇ ಬಿ. ಪ್ರತಿವಾದಿ ಮಹೆಬೂಬ ಅಲಿ ರವರು ಸದರಿ 2 ಎಕರೆ ಮಾಲಿಕ ಮತ್ತು ಕಬ್ಜೆ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಖುರ್ಷಿದ ಅಲಿ ತಿರಿಕೊಂಡ ಕಾಲಕ್ಕೆ ಹಾಗೂ ಅವರ ಮರಣ ನಂತರದ ಕಾರ್ಯಕ್ರಮಗಳಿಗೆ ನಾವೆಲ್ಲರೂ ಸೇರಿದ್ದೇವೆ ಎಂದರೆ ಸರಿ. ಆ ಸಮಯದಲ್ಲಿ ಮಟಕಿಯವರಾದ ಅನ್ಸಾರ ಸಾಬ

ರವರು ಮತ್ತು ಕಾಶಿನಾಥ ರವರು ಬಂದಿದ್ದರು ಎಂದರೆ ಸರಿ.

ಆ ಸಮಯದಲ್ಲಿ ನಾವೆಲ್ಲರೂ ನಮ್ಮ ತಂದೆ ಹೆಸರಿನಲ್ಲಿದ್ದ 2 ಎಕರೆ 37 ಗುಂಟೆ ಜಮೀನು ಸರ್ವೆ ನಂ.81 ರಲ್ಲಿ ನನ್ನ ಸಹೋದರರಾದ 1 ಮತ್ತು 2 ನೇ ಪ್ರತಿವಾದಿ ಹೆಸರಿನಲ್ಲಿ ಮಾಡಲು ನಾವುಗಳು ನಮ್ಮ ಸಮ್ಮತಿಯನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮೆಲ್ಲರ ಸಮ್ಮತಿ ಮೇರೆಗೆ ನಮ್ಮ ಇಬ್ಬರು ಸಹೋದರರಾದ 1 ಮತ್ತು 2 ನೇ ಪ್ರತಿವಾದಿಗಳು ತಮ್ಮ-ತಮ್ಮ ಹೆಸರುಗಳಲ್ಲಿ ಮೇಲೆ ಹೇಳಿದ ಸರ್ವೆ ನಂ.81 ನ್ನು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ 20 ವರ್ಷಗಳ ಹಿಂದೆ ತಿರಿಕೊಂಡಿದ್ದು, ಇವತ್ತಿನವರೆಗೂ ನಾವು ಯಾವುದೇ ಪಾಲು ಕೇಳದೇ, 2017 ರಲ್ಲಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಂದೆ ಹಯಾಯಿತಿ ಕಾಲಕ್ಕೆ ಜಮೀನುಗಳನ್ನು ಪ್ರತಿವಾದಿಗಳ ಹೆಸರುಗಳಲ್ಲಿ ಮಾಡಿಕೊಟ್ಟು, ಮರಣಾ ನಂತರ ಉಳಿದ 2 ಎಕರೆ 37 ಗುಂಟೆ ಜಮೀನನ್ನು ನಮ್ಮ ಸಮ್ಮತಿ ಮೇರೆಗೆ ಪ್ರತಿವಾದಿಗಳ ಹೆಸರಿನಲ್ಲಿ ಮಾಡಿದ್ದು, ಗೊತ್ತಿದ್ದರೂ ಕೂಡಾ ನಾವು ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**